# ಬಂಗಾರದ ನೂಲು

■ ಪ. ರಾಮಕೃಷ್ಣ ಶಾಸ್ತ್ರಿ

ಒಂದು ಹಳ್ಳಿಯಲ್ಲಿ ಒಬ್ಬ ರೈತನಿದ್ದ. ಅವನ ಹೆಂಡತಿ ಮಾಂಜಿ ಎಂಬ ಹೆಣ್ಣುಮಗುವಿಗೆ ಜನ್ಮ ನೀಡಿ ತೀರಿಕೊಂಡಳು. ರೈತ ಇನ್ನೊಬ್ಬ ಹೆಂಗಸನ್ನು ಮದುವೆಯಾದ. ಅವಳಿಗೆ ಗಂಡನ ಮೊದಲ ಮಗಳನ್ನು ಕಂಡರೆ ಆಗುತ್ತಿರಲಿಲ್ಲ. ತುಂಬ ಹಿಂಸೆ ಕೊಡುತ್ತಿದ್ದಳು. ಮಗಳು ಅನುಭವಿಸುವ ಕಷ್ಟವನ್ನು ನೋಡಲಾಗದೆ ರೈತನು ವ್ಯಥೆಯಿಂದ ಮನೆ ಬಿಟ್ಟುಹೋದ. ಆಮೇಲೆ ಮಾಂಜಿ ಮಲತಾಯಿಯಿಂದ ಅನುಭವಿಸಿದ ಕಷ್ಟಗಳಿಗೆ ಮಿತಿಯೇ ಇರಲಿಲ್ಲ. ದಿನ ಕಳೆದ ಹಾಗೆ ಮಾಂಜಿ ಕೆಲಸ ಮಾಡುವುದನ್ನು ನಿಲ್ಲಿಸಿದಳು. ಯಾರೊಂದಿಗೂ ಮಾತನಾಡುತ್ತಿರಲಿಲ್ಲ. ಮನೆಯ ಕಿಟಕಿಯ ಬಳಿ ಕುಳಿತು ಒಣಹುಲ್ಲನ್ನು ಹೊಸೆಯುವ ಕೆಲಸದಲ್ಲೇ ಮಗ್ನಳಾಗುತ್ತಿದ್ದಳು.

ಒಂದು ದಿನ ನೆರೆಯೂರಿನ ಜಮೀನ್ದಾರನ ಸೇವಕ ಹಳ್ಳಿಗೆ ಬಂದ. ಅವನಿಗೆ ಕುಡಿಯಲು ನೀರು ಬೇಕಾಗಿತ್ತು. ಕಿಟಕಿಯ ಬಳಿ ಕುಳಿತಿದ್ದ ಮಾಂಜಿಯ ಬಳಿಗೆ ಹೋಗಿ, ಕುಡಿಯಲು ನೀರು ಕೇಳಿದ. ಮಾಂಜಿ ಅವನ ಕಡೆಗೆ ನೋಡಲೇ ಇಲ್ಲ. ಆಗ ಅವಳ ಚಿಕ್ಕಮ್ಮ ಹೊರಗೆ ಬಂದಳು. 'ಯಾರು ನೀನು, ಏನು ಬೇಕಾಗಿತ್ತು?' ಕೇಳಿದಳು. ಸೇವಕ ಅವಳ ಹತ್ತಿರ ಬಂದ. 'ನಾನು ನಮ್ಮ ಊರಿನ ಜಮೀನ್ದಾರನ ಮಗನಿಗೆ ಮದುವೆಯಾಗಲು ಎಲ್ಲಿಯೂ ರೂಪವತಿಯಾದ ಹುಡುಗಿ ಸಿಗಲಿಲ್ಲ ಆದರೆ ನಿಮ್ಮ ಮನೆಯ ಕಿಟಕಿಯ ಪಕ್ಕ ಕುಳಿತಿರುವ ಹುಡುಗಿ ಸೌಂದರ್ಯದ ಖನಿ. ನಮ್ಮ ಜಮೀನ್ದಾರರ ಮನೆಗೆ ತಕ್ಕವಳೆಂಬುದು ಸತ್ಯ. ಆದರೆ ಅವಳು ಏನು ಕೇಳಿದರೂ ಮಾತೇ ಆಡುವುದಿಲ್ಲ, ಯಾಕೆ?' ಎಂದು ಕೇಳಿದ.

ಮಾಂಜಿಯ ಚಿಕ್ಕಮ್ಮನಿಗೆ ಅವಳನ್ನು ಶಾಶ್ವತವಾಗಿ ಮನೆಯಿಂದ ಓಡಿಸಲು ಇದು ಸದಾವಕಾಶ ಎಂದು ಅರ್ಥವಾಯಿತು. 'ಅಯ್ಯೋ ಅವಳು ತುಂಬ ಒಳ್ಳೆಯ ಹುಡುಗಿ. ಅವಳಲ್ಲಿ ವಿಶೇಷ ಶಕ್ತಿ ಇದೆ. ಅವಳು ಸುಮ್ಮನೆ ರಾತ್ರಿ ಬೆಳಗಾಗುವುದರೊಳಗೆ ಬೆಟ್ಟದಷ್ಟೆತ್ತರ ರಾಶಿ ಹಾಕಿದ ಹುಲ್ಲನ್ನೆಲ್ಲ ಬಂಗಾರದ ನೂಲನ್ನಾಗಿ ಬದಲಾಯಿಸಿ ಅದರಿಂದ ಚೆಲುವಾದ ಸೀರೆಯೊಂದನ್ನು ನೇಯುತ್ತಾಳೆ. ಈ ಸೀರೆ ಕೋಟಿ ವರಹಗಳಿಗೆ ಮಾರಾಟವಾಗುತ್ತದೆ. ಅವಳನ್ನು ಜಮೀನ್ದಾರನ ಮನೆಗೆ ಕರೆದುಕೊಂಡು ಹೋಗು' ಎಂದು ಹೇಳಿದಳು.

ಸೇವಕ ಹೆಂಗಸು ಹೇಳಿದ ಮಾತನ್ನು ನಂಬಿದ. ಮಾಂಜಿಯನ್ನು ಕರೆದುಕೊಂಡು ಜಮೀನ್ದಾರನ ಮನೆಯತ್ತ ಹೊರಟ. ದಾರಿಯಲ್ಲಿ ಒಂದು ಕಾಡು ಇತ್ತು. ಅಲ್ಲಿ ಸೇವಕನಿಗೆ ಆಯಾಸದಿಂದ ನಿದ್ರೆ ಬಂತು. ಒಂದು ಮರದ ಕೆಳಗೆ ಮಲಗಿಕೊಂಡ. ಮಾಂಜಿ ತನ್ನ ದುರ್ದೆಸೆಗೆ ಮರುಗುತ್ತ ಕುಳಿತುಕೊಂಡಳು. ಆಗ ಯಾವುದೋ ಪಕ್ಷಿಯ ಆರ್ತನಾದ ಕೇಳಿಸಿತು. ಎದ್ದು ಹೋಗಿ ನೋಡಿದಾಗ ಒಂದು ಗಂಡು ನವಿಲು ಬೇಟೆಗಾರರು ಒಡ್ಡಿದ ಬಲೆಯಲ್ಲಿ ಸಿಲುಕಿ ಹೊರಬರಲು ಪ್ರಯತ್ನಿಸುತ್ತ ಇರುವುದು ಕಾಣಿಸಿತು. ಅವಳು ಕನಿಕರದಿಂದ ಬಲೆಯನ್ನು ಕತ್ತರಿಸಿ ನವಿಲನ್ನು ಬಿಡುಗಡೆ ಮಾಡಿದಳು. ನವಿಲು ತನ್ನ ಒಂದು ಗರಿಯನ್ನು ಅವಳ ಮುಂದೆ ಉದುರಿಸಿತು. 'ಈ ಗರಿಯನ್ನು ಜೋಪಾನವಾಗಿ ಇರಿಸಿಕೋ. ಕಷ್ಟ ಬಂದಾಗ ಅದನ್ನು ಒಂದು ಸಲ ಸವರು. ನಿನಗೆ ನೆರವಿನ ಬೆಳಕು ಕಾಣಿಸುತ್ತದೆ' ಎಂದು ಹೇಳಿ ಹೊರಟುಹೋಯಿತು.

ಸೇವಕ ನಿದ್ರೆಯಿಂದ ಎಚ್ಚರಗೊಂಡ. ಮಾಂಜಿಯನ್ನು ಕರೆದುಕೊಂಡು ಅರಮನೆಗೆ ಬಂದ. ಅವಳ ಸೌಂದರ್ಯ ನೋಡಿ ಜಮೀನ್ದಾರನ ಮಗನಿಗೆ ತುಂಬ ಸಂತೋಷವಾಯಿತು. ಆದರೆ ಸೇವಕ ಅವನ ಕಿವಿಯಲ್ಲಿ ಗುಟ್ಟಾಗಿ, 'ಬಡವರ

